ದಿನಾಂಕಃ **20.02.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಎಸ್.ಆರ್. ವಕೀಲರಿಂದಃ

ನಾನು 4 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ 04.05.1984. ದಿನಾಂಕಃ04.05.1984 ರ ಪೂರ್ವದಲ್ಲಿ ನಮ್ಮ ಕುಟುಂಬದಲ್ಲಿ ಆದಂತಹ ವ್ಯವಹಾರಗಳ ಬಗ್ಗೆ ನನಗೆ ವ್ಯಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ತಾತ ದರವಣ್ಣನವರಿಗೆ ಇಬ್ಬರು ತಮ್ಮಂದಿರು ಇದ್ದರು. ನನ್ನ ತಾತ ದರವಣ್ಣ ಮತ್ತು ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದರವಣ್ಣ ಮತ್ತು ಅವರ ಅಣ್ಣ ತಮ್ಮಂದಿರು ಒಟ್ಟಿಗೆ ವಾಸವಾಗಿದ್ದಾಗ ಅವರ ಕುಟುಂಬಕ್ಕೆ ಇದ್ದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1962 ರಲ್ಲಿ ದರವಣ್ಣ ಮತ್ತು ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

2. 1962 ರಲ್ಲಿ ಆದಂತಹ ವಿಭಾಗದಲ್ಲಿ ದಾವಾ 1 ರಿಂದ 5 ನೇ ಸ್ವತ್ತುಗಳು 1 ನೇ ವಾದಿ, 1 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿ ಪಾಲಿಗೆ ಜಂಟಿಯಾಗಿ ಬಂದಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 1 ರಿಂದ 5 ನೇ ಸ್ವತ್ತುಗಳನ್ನು ಹೊರತು ಪಡಿಸಿ ಇತರೆ ಸ್ವತ್ತುಗಳು ಸಹ 1 ನೇ ವಾದಿ, 1 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿಯವರಿಗೆ ಪಾಲಿಗೆ ಜಂಟಿಯಾಗಿ ಬಂದಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕೆ.ಬಸವನಹಳ್ಳಿ ಗ್ರಾಮದಲ್ಲಿ ದರವಣ್ಣನವರಿಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

3. 1964 ರಲ್ಲಿ 1 ನೇ ವಾದಿ , 1 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿರವರಿಗೆ 1962 ರ ವಿಭಾದಲ್ಲಿ ಜಂಟಿಯಾಗಿ ಬಂದಿದಂತಹ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1964 ರ ವಿಭಾಗದಂತೆ ಪಾಲುದಾರರು ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 1962 ಮತ್ತು 1964 ರಲ್ಲಿ ವಿಭಾಗ ಆಗಿದ್ದರು ಸಹ ಖಾತೆ ನನ್ನ ತಾತನ ಹೆಸರಿನಲ್ಲಿ ಮುಂದುವೆರೆದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. 1998-99 ರಲ್ಲಿ 1962 ಮತ್ತು 1964 ರಲ್ಲಿ ಆದಂತಹ ವಿಭಾಗದಂತೆ ಖಾತೆ ವರ್ಗಾಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1998-99 ರಲ್ಲಿ 1964 ರ ವಿಭಾಗದಂತೆ ಖಾತೆ ವರ್ಗಾವಣೆ ಮಾಡಲಾಗಿರುತ್ತದೆ ಎಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 6 ನೇ ಸ್ವತ್ತು 1972 ರಲ್ಲಿ 1 ನೇ ಪ್ರತಿವಾದಿಯ ಗಂಡನಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ದಾವಾ 6 ನೇ ಸ್ವತ್ತು ನಮ್ಮ ಕುಟುಂಬದಲ್ಲಿ ವಿಭಾಗ ಆದ ನಂತರ 1 ನೇ ಪ್ರತಿವಾದಿಯ ಗಂಡನಿಗೆ ಮಂಜೂರಾದ ಕಾರಣ 1998-99 ರಲ್ಲಿ ಆದಂತಹ ಮ್ಯುಟೇಷನ್ ಆದೇಶದಲ್ಲಿ ಸದರಿ ಸ್ವತ್ತನ್ನು ಸೇರಿಸಿರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಯಾವುದೇ ವಿಭಾಗ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ 6 ನೇ ಸ್ವತ್ತಿನಲ್ಲಿ ನಾವು ಯಾವುದೇ ಕಾಲದಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

4. ನಮ್ಮ ಕುಟುಂಬದಲ್ಲಿ 1964 ರಲ್ಲಿಯೇ ವಿಭಾಗ ಆಗಿದ್ದರು ಸಹ 1 ನೇ ಪ್ರತಿವಾದಿಯ ಗಂಡನಿಗೆ ಮಂಜೂರಾಗಿರುವ ಆಸ್ತಿಯನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. 1998-99 ರಲ್ಲಿ ಆದಂತಹ ಖಾತೆ ವರ್ಗಾವಣೆಯನ್ನು ನಾನು ಪ್ರಶ್ನಿಸಿರುವುದಿಲ್ಲ.

ದಾವಾ 6 ನೇ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ವರ್ಗಾವಣೆಯಾಗಿರುವುದನ್ನು ನಾವು ಪ್ರಶ್ನಿಸಿರುವುದಿಲ್ಲ. ದಾವಾ 6 ನೇ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುವುದನ್ನು ಪ್ರಶ್ನಿಸಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ 6 ನೇ ಸ್ವತ್ತಿನಲ್ಲಿ ನಮಗೆ ಯಾವುದೇ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ